ಎದುರಾದರೂ ಕನಿಷ್ಠ ಒಂದು ಮಾತು ಹೇಳದೆ ಹೊರಟುಹೋಗಿದ್ದಾಳೆ ನೋಡು ನಿನ್ನ ವಾಕಿಂಗ್ ಗೆಳತಿ' – ವ್ಯಂಗ್ಯವಾಗಿ ಹೇಳಿದ ಶಶಾಂಕ್. ಮರುಮಾತನಾಡದೆ ಕಾರಿನ ಗಾಜಿನಿಂದ ಹೊರಗೆ ನೋಡತೊಡಗಿದೆ.

ನಿಜ ಹೇಳಬೇಕೆಂದರೆ ಲಿಂಡಾ ಅವರು ಎಲ್ಲಿ ಹೋದರೋ ತಿಳಿದಿದ್ದರೂ ಅವರೊಂದಿಗೆ ಹೋಗುವಷ್ಟು ಸ್ನೇಹವೇನಿಲ್ಲ. ಇಬ್ಬರೂ ವಾಕಿಂಗ್ ಮಾಡುವಾಗ ಸಾಕಷ್ಟು ಮಾತನಾಡುತ್ತೇವೆಯೇ ಹೊರತು ಒಬ್ಬರ ಮನೆಗೆ ಮತ್ತೊಬ್ಬರು ಹೋದದ್ದು, ಬಂದದ್ದು ಇಲ್ಲ. ಇನ್ನು ಗಂಡಸರಿಬ್ಬರೂ ಯಾವಾಗಲಾದರೂ ಹೊರಗೆ ಕಾಣಿಸಿದಾಗ 'ಹಲೋ' ಹೇಳಿಕೊಳ್ಳುವಷ್ಟೇ ಮಾತು.

ಬೆಟ್ಟದ ತಿರುವು ಮುಗಿಯುತ್ತಲೇ ನಮ್ಮ ಮನೆ ದಟ್ಟವಾದ ಹೊಗೆಯಲ್ಲಿ ಕಣ್ಮರೆಯಾಯಿತು. ಬಳ್ಳಿ, ಹೂಗಳಿಂದ ಆವೃತ್ತವಾದ ಬಹಳ ಅಕ್ಕರೆಯಿಂದ ತೆಗೆದುಕೊಂಡ ಬಾಲ್ಯದ ಕನಸಿನ ಮನೆಯಲ್ಲಿರುವುದು ಅಪಾಯವೆಂಬ ವಿಷಯವನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ.

ನನ್ನ ಮಿತಿಯಲ್ಲಿ ಮನೆಯೆಂದರೆ ವಸ್ತುಗಳು, ಅವುಗಳೊಂದಿಗೆ ಬೆಸೆದ ಬಾಂಧವ್ಯದ ನೆನಪುಗಳು. ಈಗ ಮನೆಯೇ ಕಳೆದುಕೊಳ್ಳಬೇಕಾಗುತ್ತದೆಯೆಂದರೆ ಬಹಳ ದುಃಖವಾಗುತ್ತಿದೆ.

ಎರಡೂ ಕೈ ಮುಗಿದು ಮನಸಿನಲ್ಲಿಯೇ ಎಲ್ಲ ದೇವರುಗಳಿಗೆ ನಮಸ್ಕಾರ ಮಾಡತೊಡಗಿದೆ.

ಚಿಕ್ಕಂದಿನಲ್ಲಿ ಪರೀಕ್ಷೆಗಳಿಗೆ ಹೋಗುವಾಗ ಅಮ್ಮ ವರಾಂಡದಲ್ಲಿರುವ ದೇವರ ಫೋಟೊಗೆ ನಮಸ್ಕಾರ ಮಾಡುವಂತೆ ಹೇಳಿದರೆ ಕಿವಿಗೆ ಹಾಕಿಕೊಳ್ಳದೆ ಸುಮ್ಮನೆ ಹೋಗುತ್ತಿದ್ದ ನಾನೇನಾ ಈಗ ಹೀಗೆ...

ಪ್ರಸ್ತುತ ನಮ್ಮ ಮನೆಯಿಂದ ಹತ್ತು ಮೈಲಿ ದೂರದ ಹೋಟೆಲಿನಲ್ಲಿದ್ದೇವೆ.

ಮೊದಲೇ ಕೊರೊನಾ ಕಷ್ಟಕಾಲ. ಗಾಯದ ಮೇಲೆ ಬರೆಯಂತೆ ಈ ವೈಲ್ಡ್ ಫೈರ್ಸ್ ಕಷ್ಟ ಬೇರೆ.

ಲಿಂಡಾಳಿಗೆ ಫೋನ್ ಮಾಡಿದೆ.

ನನ್ನ ಕಂಠದಲ್ಲಿನ ನೋವೇ ಅವಳ ಗಂಟಲಿನಲ್ಲಿಯೂ ಧ್ವನಿಸಿತು.

'ಏನು ಮಾಡೋಣ ಲಿಂಡಾ, ಬಾಧೆಪಡಬೇಡ' ಎಂದು ಸಮಾಧಾನದ ಮಾತನಾಡಿದೆ.

'ಕೇವಲ ಬಾಧೆಯಲ್ಲ, ನಿಸ್ಸಹಾಯಕತೆಯಿಂದ ಮನ ಕೆರಳುವಂತಾಗಿದೆ' – ಹೇಳಿದಳು ಆ ಕಡೆಯಿಂದ.

'ಹೌದು' ಎಂದೆ.

'ಕ್ಯಾಲಿಫೋರ್ನಿಯಾದಲ್ಲಿ ಪ್ರತಿ ವರ್ಷ ಹೀಗೆ ನೂರಾರು ಎಕರೆ ಬೆಂಕಿಗಾಹುತಿಯಾಗುತ್ತಿದ್ದರೂ ಸರ್ಕಾರಗಳಿಗೆ ಬುದ್ಧಿ ಬರುತ್ತಿಲ್ಲ. 2020ನೇ ವರ್ಷವಂತೂ ಹೇಳುವುದೇ ಬೇಕಾಗಿಲ್ಲ. ಈ ಒಂದು ವರ್ಷದಲ್ಲಿಯೇ ಈವರೆಗೆ ಮೂರು ಮಿಲಿಯನ್ ಎಕರೆಗಿಂತಲೂ ಜಾಸ್ತಿ ಅರಣ್ಯ ಸುಟ್ಟುಹೋಗಿದೆ. ಒಮ್ಮೆಗೇ ಸುಮಾರು ಹತ್ತು ಕಡೆ ಹೊತ್ತಿಕೊಂಡ ವೈಲ್ಡ್ ಫೈರ್ಸ್‌ನಿಂದಾಗಿ ನಾಲ್ಕು ಸಾವಿರಕ್ಕೂ ಹೆಚ್ಚು ಮನೆಗಳು ಭಸ್ಮವಾಗಿವೆ. ಹೀಗೆ ಮನೆ ಭಸ್ಮವಾಗಿ ನಿರಾಶ್ರಿತರಾದವರು, ನಮ್ಮ



ಹಾಗೆ ಮನೆ ಬಿಟ್ಟು ಹೋಗಬೇಕಾಗಿ ಬಂದವರು ಸಾವಿರಗಟ್ಟಲೆ ಇದ್ದಾರೆ ಎಂದು ಹೇಳಿ, ಮತ್ತೆ ತಾನೇ ಮುಂದುವರಿಸಿ ಹೀಗೆ ಹಠಾತ್ತನೆ ಪ್ರಕೃತಿ ವೈಪರೀತ್ಯದಿಂದಾಗಿ ಹೊತ್ತಿಕೊಳ್ಳುವ ಕಾಳ್ಗಿಚ್ಚನ್ನು ಕೂಡ ನಿಯಂತ್ರಿಸುವ ಮಾರ್ಗೋಪಾಯವನ್ನು ಈಗಿಂದೀಗಲೇ ಕಂಡುಹಿಡಿದಿದ್ದಾರಂತೆ' ಎಂದಳು.

'ಬೇರೆ ಮಾರ್ಗೋಪಾಯ ಇದೆಯೆನ್ನುತ್ತೀಯಾ?' ಆಸೆಯಿಂದ ಕೇಳಿದೆ.

'ಊಂ... ಪ್ರಿಸ್ಕ್ರೈಬ್ಡ್ ಫೈರ್. ಇದು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೆಯೋ ತಿಳಿಯದಿದ್ದರೋ ಪ್ಲಾನ್ ಮಾತ್ರ ರಿಲೀಸ್ ಮಾಡಿದ್ದೇವೆನ್ನುತ್ತಿದ್ದಾರೆ' ಎಂದು ನಿಟ್ಟುಸಿರಿಡುತ್ತ ಹೇಳಿದಳು.

'ಪ್ರಿಸ್ಕ್ರೈಬ್ಡ್ ಫೈರ್ ಅಂದರೆ?' ಕೇಳಿದೆ.

'ಅಂದರೆ ಹೀಗೆ ಫೈರ್ ಹಜಾರ್ಡ್ ಇರುವ ಅರಣ್ಯ ಪ್ರಾಂತ್ಯಗಳು, ನಿವಾಸ ಪ್ರಾಂತ್ಯಗಳು ಮೊದಲಾದವುಗಳ ಸುತ್ತಲೂ ದೊಡ್ಡ ದೊಡ್ಡ ಪ್ರೊಕ್ಲೆಯಿನರ್‌ಗಳಿಂದ ಲಕ್ಷ್ಮಣರೇಖೆ ಎಳೆದಂತೆ ಸರಹದ್ದುಗಳನ್ನು ಅಗೆಯುತ್ತಾರೆ. ಆ ಸರಹದ್ದುಗಳಾಚೆಗೆ ಸ್ವಲ್ಪ ಪ್ರಾಂತ್ಯದವರೆಗೂ ಹುಲ್ಲನ್ನು ಪೂರ್ತಿ ಸುಟ್ಟು ನೆಲವನ್ನು ಸಿದ್ಧಪಡಿಸುತ್ತಾರೆ. ಅದರಿಂದ ಒಂದು ಕಡೆ ಹೊತ್ತಿದ ಉರಿ ಅತಿ ವೇಗವಾಗಿ ಇತರ ಪ್ರಾಂತ್ಯಗಳಿಗೆ ವಿಸ್ತರಿಸದಂತೆ, ಮುಖ್ಯವಾಗಿ ಬೆಟ್ಟಗಳ ಮೇಲೆ ಹುಲ್ಲುಭೂಮಿ ಹೊತ್ತಿದಾಗೆಲ್ಲ ಸುತ್ತಮುತ್ತಲಿರುವ ಊರುಗಳು ಸುಟ್ಟುಹೋಗದಂತೆ ತಡೆಯಬಹುದು' ಎಂದಳು.

'ಹಮ್ಮಯ್ಯ, ನಮ್ಮ ಕಾಲಕ್ಕೇ ಅಂತಹುದು ಕೂಡಲೇ ಮಾಡಿದರೆ ಚೆನ್ನಾಗಿರುತ್ತದೆ' ಎಂದೆ ಆಶಾಭಾವದಿಂದ.

'ನಮ್ಮ ಪ್ರಾಂತ್ಯದಲ್ಲಿ ಶುರು ಮಾಡಿದ್ದಾರೆಂದು ಕೇಳಿದೆ. ಕಡಿಮೆ ಗಾಳಿ ಬೀಸುವ ವಸಂತಕಾಲದಲ್ಲಿ ಇದನ್ನು ಮಾಡಬೇಕಂತೆ. ಈ ವರ್ಷದಲ್ಲಿ ಈಗಿಂದೀಗ್ಗೆ ಮಾಡಬಹುದು, ಮಾಡದಿರಬಹುದು. ಹೇಗಾದರಾಗಲಿ ಅಗ್ನಿ ನಮ್ಮ ಮನೆಗಳವರೆಗೂ ಬರುವುದಿಲ್ಲವೆಂದು ಆಶಿಸೋಣ. ನೀವು ಹೇಗಿದ್ದೀರೋ ಗೊತ್ತಿಲ್ಲ. ನಮಗಂತೂ ಕಣ್ಣರೆಪ್ಪೆ ಮುಚ್ಚಲಾಗುತ್ತಿಲ್ಲ. ಅಗ್ನಿಶಾಮಕ ದಳದವರು ನಮ್ಮ ಕಾಲೊನಿ ದಾರಿ ಮುಚ್ಚಿದ್ದರೂ ನಮ್ಮ ಜಾರ್ಜ್ ಮನೆಯ ಬಳಿ ಕಳ್ಳತನದಿಂದ ಹೋಗಿ ಮನೆಯ ಸುತ್ತಲೂ ಲಾನ್ ಅನ್ನು, ಗೋಡೆಗಳನ್ನು ನೀರಿನಿಂದ ತೋಯಿಸಿ ಬರುತ್ತಿದ್ದಾನೆ. ಯಾವಾಗಲೂ ಅದೇ ಕನವರಿಸುತ್ತ ಹುಚ್ಚನಂತೆ ತಿರುಗಾಡುತ್ತಿದ್ದಾನೆ' ಎಂದಳು ಬಹಳ ನೋವಿನಿಂದ.

'ನನಗೂ ಅರ್ಥವಾಗುತ್ತದೆ ಲಿಂಡಾ, ನಿನಗೆ ಅಭ್ಯಂತರವಿಲ್ಲದಿದ್ದರೆ ನೀವು ಯಾವ ಹೋಟೆಲಿನಲ್ಲಿದ್ದೀರೋ ತಿಳಿದುಕೊಳ್ಳಬಹುದಾ?'

'ಹೋಟೆಲ್‌ಗಳಿಗೆ ದಿನಕ್ಕೆ ನೂರಾರು ಡಾಲರ್‌ಗಟ್ಟಲೆ ಸುರಿಯುವುದೇಕೆಂದು ಎಯಿರ್ ಬೀ ಎನ್ ಬೀನಲ್ಲಿ ಮನೆ ಬಾಡಿಗೆಗೆ ಪಡೆದಿದ್ದೇವೆ. ಆದರೂ ಮನಸೆಲ್ಲ ಮನೆಯ ಮೇಲೆಯೇ' ಎಂದಳು ಲಿಂಡಾ.

ಇನ್ನೂ ಇವಾಕ್ಯುಯೇಷನ್ ಆರ್ಡರ್ ಮುಂದುವರಿಯುತ್ತಿರುವುದರಿಂದ ನಾನೂ ಎಯಿರ್ ಬೀ ಎನ್ ಬೀನಲ್ಲಿ ಯಾವುದಾದರೂ ಮನೆ ಸ್ವಲ್ಪ ಅಗ್ಗವಾಗಿ ಸಿಗುವುದೇನೋ ಎಂದು ನೋಡತೊಡಗಿದೆ.

ಶಶಾಂಕ್‌ನನ್ನು ಕರೆದು 'ಇಲ್ಲಿ ಸ್ವಲ್ಪ ನೋಡುತ್ತೀಯಾ?' ಕೇಳಿದೆ.

ಯಾವಾಗ ಎದ್ದಿದ್ದನೋ ಆಗಲೇ ಲ್ಯಾಪ್‌ಟಾಪ್ ಮುಂದೆ ಗಂಭೀರವಾಗಿ ಆಫೀಸ್ ಕೆಲಸ ಆರಂಭಿಸಿದ್ದ. ನನಗೆ ಕೋಪ ಬಂದು ನನ್ನ ಲ್ಯಾಪ್‌ಟಾಪ್ ಮಂಚದ ಮೇಲಿಟ್ಟು, 'ನಾನು ನಾಳೆಯಿಂದ ಎಲ್ಲಿ ಇರುವುದೆಂದು ಆತಂಕ ಪಡುತ್ತಿದ್ದರೆ ನೀನು ಇಷ್ಟು ಗಂಭೀರವಾಗಿ ಆಫೀಸ್ ಕೆಲಸ ಮಾಡಲು ಮನಸು ಹೇಗೆ ಬರುತ್ತದೆ?' ಎಂದು ಕೂಗಾಡುತ್ತ ಹಿಂದಿನಿಂದ ದಢಾರನೆ ಅವನ ಲ್ಯಾಪ್‌ಟಾಪ್ ಮುಚ್ಚಿದೆ. 'ಅಯ್ಯೋ... ಸೇವ್ ಮಾಡಿಲ್ಲ' ಎಂದು ಕೂಗಾಡುತ್ತ ಹೇಳಿದ ಶಶಾಂಕ್ ಮಾತು ಕೇಳಿಸಿಕೊಳ್ಳಲಿಲ್ಲ.

ಬಹಳ ಕೋಪದಿಂದ ಬಾಲ್ಕನಿಗೆ ಹೋಗಿ ಹೊರಗೆ ನೋಡುತ್ತ ಕುಳಿತ.

ನಾನೂ ಕೋಪದಿಂದ ತಾನೇ ಮಾತನಾಡುವವರೆಗೂ ಮಾತನಾಡುವುದಿಲ್ಲ ಎಂದು ಮಂಚದಲ್ಲಿ ಬೋರಲಾಗಿ ಬಿದ್ದುಕೊಂಡೆ.

ಅದೆಷ್ಟು ಹೊತ್ತು ಹಾಗೇ ಇದ್ದೆನೋ ಗೊತ್ತಾಗಲಿಲ್ಲ.

ಅತ್ತೂ ಅತ್ತೂ ಒಣಗಿದ್ದ ಕೆನ್ನೆ ಸವರಿಕೊಂಡು ಎದ್ದು, ಕೆಳಗೆ ಬಿದ್ದಿದ್ದ ಶಶಾಂಕ್‌ನ ಆಫೀಸ್ ಲ್ಯಾಪ್‌ಟಾಪ್ ತೆಗೆದೆ.

ಅಷ್ಟರಲ್ಲೇ ಮನಸು ಮೆತ್ತಗಾಗಿ ಪಾಪ ಯಾವ ಮುಖ್ಯ ಕೆಲಸ ಮಾಡುತ್ತಿದ್ದನೋ! ಸೇವ್ ಮಾಡಗೊಡದೆ ಮುಚ್ಚಿಬಿಟ್ಟೆ. ನನ್ನನ್ನು ನಾನು ಬೈದುಕೊಳ್ಳುತ್ತ ಲಾಗಿನ್ ಮಾಡಿದೆ. ಬ್ರೌಸರ್‌ನಲ್ಲಿ ಎದುರಿಗೆ ಎಯಿರ್ ಬೀ ಎನ್ ಬೀ ಸೈಟ್ ಕಾಣಿಸಿತು.

ಆ ಕೂಡಲೇ ಇವ್ಯಾಕ್ಯುಯೇಷನ್ ಆರ್ಡರ್ ತೆಗೆದುಹಾಕಿರುವಂತೆ ಬಂದ ಮೆಸೇಜ್ ನೋಟಿಫಿಕೇಷನ್ ನನ್ನ ಮೊಬೈಲಿನಲ್ಲಿ ಕಂಡಿತು.

ಒಂದೇ ಉಸಿರಿಗೆ ಬಾಲ್ಕನಿಗೆ ಹೋಗಿ ಇನ್ನೂ ಹಾಗೇ ಕುಳಿತಿದ್ದ ಶಶಾಂಕ್ ಬಳಿ ಹೋಗಿ ತಲೆ ಸವರುತ್ತ 'ಸಾರಿ' ಎನ್ನುವ ವೇಳೆಗೆ ನನ್ನ ಧ್ವನಿ ಗದ್ಗದವಾಯಿತು.

ಶಶಾಂಕ್ ಚಿಕ್ಕ ಮಗುವಿನಂತೆ ಬಿಕ್ಕಿ ಬಿಕ್ಕಿ ಅಳುತ್ತ ಗಟ್ಟಿಯಾಗಿ ನನ್ನನ್ನು ತಬ್ಬಿಕೊಂಡ.

ಪ್ರತಿಕ್ರಿಯಿಸಿ: feedback@sudha.co.in